ಒ.ಎಸ್.54/2016
ಪಿ.ಡಬ್ಲ್ಯೂ3 ದಿಃ 16-07-2019

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

<u>ಪಾಟೀ ಸವಾಲುಃ</u> ಶ್ರೀ ವೈ.ಕೆ.ಪಿ ಪ್ರತಿವಾದಿ ಪರ ವಕೀಲರಿಂದ

ವಾದಿಯ ಜಮೀನು ನನ್ನ ಜಮೀನಿನ ಪಕ್ಕ ಇರುತ್ತದೆ. ವಾದಿಯರು ಪ್ರತಿವಾದಿಗಳ ವಿರುದ್ಧ ಹೂಡಿರುವ ದಾವಾ ಕಾರಣದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ದಾವಾ ಸ್ವತ್ತಿನ ಚೆಕ್ಕುಬಂದಿ ಗೊತ್ತು. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 3 ಎಕರೆ 5 ಗುಂಟೆ. ಸರ್ವೆ ನಂ. 132/2 ಅದರ ಚೆಕ್ಕುಬಂಧಿಃ ಉತ್ತರಕ್ಕೆಃ ಭೋಜೇಗೌಡ, ದಕ್ಷಿಣಕ್ಕೆಃ ರತ್ನಮ್ಮ , ಪೂರ್ವಕ್ಕೆಃ ಮಂಜೇಗೌಡ, ಪಶ್ಚಿಮಕ್ಕೆಃ ನನ್ನ ಬಾಬ್ತು ಇರುತ್ತದೆ. ಸರ್ವೆ ನಂ. 132/2 ರಲ್ಲಿ 3 ಎಕರೆ 5 ಗುಂಟೆ ಜಮೀನಿನ ಪೈಕಿ 3 ಗುಂಟೆ ಖರಾಬು ಇರುತ್ತದೆ. ಸದರಿ 3 ಗುಂಟೆ ಖರಾಬ್ ಆಸ್ತಿಯು ಹೇಮಾವತಿ ನಾಲೆಗೆ ಸೇರಿರುತ್ತದೆ. ನನ್ನ ನಿಜವಾದ ಹೆಸರು ಯೋಗೇಶ್. ಮರೀಗೌಡ ಮತ್ತು ವೆಂಕಟೇಗೌಡರು ಪೌತಿಯಾಗಿರುತ್ತಾರೆ ಎಂದರೆ ಸರಿ. ಸದರಿ ಮರೀಗೌಡರು ಪೌತಿಯಾಗಿ ಸುಮಾರು 4 ವರ್ಷಗಳಾಗಿದೆ, ವೆಂಕಟೇಗೌಡ ಪೌತಿಯಾಗಿ 6 ವರ್ಷಗಳಾಗಿದೆ. ಮರೀಗೌಡರು ತಮ್ಮ ಹಿಸ್ಸಾ ಬಾಬ್ತು 1 ಎಕರೆ 11 ಗುಂಟೆ ಜಮೀನನ್ನು ಭೋಜೇಗೌಡರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಮರೀಗೌಡರ ಹಿಸ್ಸಾ ಬಾಬ್ತು 1 ಎಕರೆ 21 ಗುಂಟೆ ಪೈಕಿ 20 ಗುಂಟೆ ಜಮೀನನ್ನು ಭೋಜೇಗೌಡರಿಗೆ , 20 ಗುಂಟೆ ಜಮೀನನ್ನು ನಂಜಶೆಟ್ಟಿಯವರಿಗೆ ಉಳಿಕೆ 20 ಗುಂಟೆ ಜಮೀನಿನಲ್ಲಿ ವಾದಿ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ಪ್ರಸ್ತುತ ಸ್ವಾಧೀನದಲ್ಲಿರುವ ಜಮೀನಿನ ಚೆಕ್ಕುಬಂದಿ ಪೂಃ ಭೋಜೇಗೌಡ, ಪಃ ರತ್ನಮ್ಮನವರ ಜಮೀನು, ಉಃ ಮಂಜೇಗೌಡರ ಜಮೀನು, ದಃ ನನ್ನ ಬಾಬ್ತು ಜಮೀನು ಇರುತ್ತದೆ. ಮರೀಗೌಡ ಮತ್ತು ವೆಂಕಟೇಗೌಡ ಮೌಖಿಕವಾಗಿ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮೌಖಿಕ ಹಿಸ್ಸಾ ನಡವಳಿಕೆಗಳ ಮೇರೆಗೆ ಮರೀಗೌಡರಿಗೆ ದಕ್ಷಿಣಕ್ಕೆ 1 ಎಕರೆ 11 ಗುಂಟೆ ಮತ್ತು ವೆಂಕಟೇಗೌಡರಿಗೆ ಉತ್ತರದ ಕಡೆಗೆ 1 ಎಕರೆ 31 ಗುಂಟೆ ಹಿಸ್ಸೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಮರೀಗೌಡ ತನ್ನ ಎಲ್ಲಾ ಆಸ್ತಿಗಳನ್ನು ಮಾರಿಕೊಂಡು ಕೇವಲ 10 ಗುಂಟೆ ಜಮೀನನ್ನು ಮಾತ್ರ ಸರ್ವೆ ನಂ 132/2 ರಲ್ಲಿ ಉಳಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು 20 ಗುಂಟೆ ಜಮೀನನ್ನು ಉಳಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮರೀಗೌಡರ ಉಳಿಕೆ ಜಮೀನನ್ನು ಆತನ ಪತ್ನಿಯಾದ 1 ನೇ ವಾದಿಗೆ ಎಂ.ಆರ್. 7/87-88 ರಲ್ಲಿ ವರ್ಗಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮರೀಗೌಡರು ನ್ಯಾಯಾಲಯದ ಡಿಕ್ರಿಯ ಪ್ರಕಾರ ನಂಜಶೆಟ್ಟಿಯವರಿಗೆ 21

ಗುಂಟೆ ಜಮೀನನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಮರೀಗೌಡರು ಸರ್ವೆ ನಂ. 132/2 ರಲ್ಲಿ ದಿಃ 28-8-2002 ರಲ್ಲಿ 20 ಗುಂಟೆ ಜಮೀನನ್ನು ಭೋಜೇಗೌಡರಿಗೆ ಪರಭಾರೆ ಮಾಡಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವಹಿವಾಟಿನ ನಂತರ ಮರೀಗೌಡರ ಪಾಲಿಗೆ ಕೇವಲ 10 ಗುಂಟೆ ಮಾತ್ರ ಉಳಿದಿರುತ್ತದೆ ಎಂದರೆ ಸರಿಯಲ್ಲ. ಮರೀಗೌಡರಿಗೆ 20 ಗುಂಟೆ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯರ ಜೊತೆ ಷರೀಕಾಗಿ ಮರೀಗೌಡರಿಗೆ 10 ಗುಂಟೆ ಮಾತ್ರ ಜಮೀನು ಉಳಿದಿದ್ದರೂ ಸಹ 20 ಗುಂಟೆ ಉಳಿದಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ವಾದಿಯು ಮರೀಗೌಡರ ಪೌತಿ ನಂತರ ಉಳಿದ 10 ಗುಂಟೆ ಜಮೀನನ್ನು ಎಂ.ಆರ್. 18/2014-15 ರ ಮೇರೆಗೆ ಪೌತಿ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯು ಪೌತಿ ವೆಂಕಟೇಗೌಡರ ಮಕ್ಕಳು ಎಂದರೆ ಸರಿ. ವೆಂಕಟೇಗೌಡರ ಹಿಸ್ಸೆಗೆ 1 ಎಕರೆ 21 ಗುಂಟೆ ಜಮೀನು ಬಂದಿರುತ್ತದೆ. ದಾವಾ ಆಸ್ತಿ ಸರ್ವೆ ನಂ.ರ ಆಸ್ತಿಯನ್ನು ಮರೀಗೌಡ ಮತ್ತು ವೆಂಕಟೇಗೌಡರ ನಡುವೆ ಭಾಗವಾಗುವ ಸಮಯದಲ್ಲಿ ನಾನು ಹಾಜರಿರುವುದಿಲ್ಲ ಎಂದರೆ ಸರಿ ಹಾಗೂ ನಾನು ಬಾಲ್ಯದಲ್ಲಿದ್ದಾಗಲೇ ಸದರಿ ಮರೀಗೌಡ ಮತ್ತು ವೆಂಕಟೇಗೌಡರ ನಡುವೆ ಹಿಸ್ಸೆಯಾಗಿರುತ್ತದೆ. ನನಗೆ ಸದರಿ ಮರೀಗೌಡ ಮತ್ತು ವೆಂಕಟೇಗೌಡರ ನಡುವೆ ಹಿಸ್ಸಾ ಭಾಗವಾಗಿರುವ ಬಗ್ಗೆ ನನ್ನ ಜಮೀನಿನ ಪಕ್ಕ ಮರೀಗೌಡರ ಜಮೀನು ಇರುವ ಕಾರಣದಿಂದ ನನಗೆ ಹಿಸ್ಸಾ ನಡವಳಿಕೆಗಳು ಗೊತ್ತು. ನನಗೆ ವೈಯಕ್ತಿಕವಾಗಿ ಸದರಿ ಹಿಸ್ಸಾ ವಿಭಾಗದ ಬಗ್ಗೆ ಯಾರು ಮಾಹಿತಿ ನೀಡಿರುವುದಿಲ್ಲ. ನಾನು ಈ ಮೇಲೆ ಹೇಳಿದ ಹಿಸ್ಸಾ ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮರೀಗೌಡ ಹಾಗೂ ವೆಂಕಟೇಗೌಡರ ಕುಟುಂಬದ ವಿದ್ಯಮಾನಗಳು ಗೊತ್ತಿಲ್ಲದಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಸದರಿ ಮರೀಗೌಡ ಹಾಗೂ ವೆಂಕಟೇಗೌಡರಿಗೆ ಎಷ್ಟು ಲಾಟು ಆಸ್ತಿಗಳು ಹಿಸ್ಸೆ ಮೇಲೆ ಹೋಗಿರುತ್ತದೆ ಎಂದರೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಸ.ಇ.ಎ.ಒ**

**3ನೇ ಅಧಿಕ ಸಿವಿಲ್ ಜಡ್ಜ್ ಮತ್ತು**

**ಜೆ.ಎಂ.ಎಫ್.ಸಿ**